## ಲಿಂಗತ್ವ ಅಲ್ಪಸಂಖ್ಯಾತರ ಪ್ರಾತಿನಿಧ್ಯ

2012ರಲ್ಲಿ ಮಿಸ್ ಯೂನಿವರ್ಸ್ ಆರ್ಗನೈಸೇಷನ್ ತನ್ನ ನಿಯಮಗಳನ್ನು ಬದಲಿಸಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿತ್ತು. 2018ರಲ್ಲಿ ಮೊಟ್ಟ ಮೊದಲ ಬಾರಿಗೆ ಏಂಜೆಲಾ ಪೋನ್ಸ್ ಎಂಬ ಲಿಂಗತ್ವ ಅಲ್ಪಸಂಖ್ಯಾತೆ ಸ್ಪೇನ್ ದೇಶವನ್ನು ಪ್ರತಿನಿಧಿಸಿ ಸ್ಪರ್ಧಿಸಿದರು.

'ನಾನು ಸಮಾನತೆಯ ವಿಶ್ವದಲ್ಲಿ ಬದುಕಲು ಇಚ್ಛಿಸುತ್ತೇನೆ. ಈ ಸಂದೇಶವನ್ನು ನಾನು ಪ್ರಪಂಚಕ್ಕೆ ನೀಡಲು ಈ ಸ್ಪರ್ಧೆಯನ್ನು ಗೆಲ್ಲಲೇಬೇಕಿಲ್ಲ. ನಾನು ಇಲ್ಲಿಗೆ ಬಂದು ನಿಂತಿರುವುದೇ ಸಾಕು' ಎಂದಿದ್ದರು.




ನೆದರ್ಲೆಂಡ್ಸ್‌ನ ರಿಕಿ ವಾಲೆರಿ

2023' ಹಾಗೂ 'ಮಿಸ್ ಪೋರ್ಚುಗಲ್ 2023' ಕಿರೀಟ ಹೊತ್ತು ಭುವನ ಸುಂದರಿ ಸ್ಪರ್ಧೆಗೆ ಅಡಿಯಿಟ್ಟ ಇಬ್ಬರಿಗೂ ಹೆಗಲಾಗಿದ್ದುದು ಅವರಲ್ಲಿನ ಆತ್ಮವಿಶ್ವಾಸ. ರಿಕಿ, ಸ್ಪರ್ಧೆಯಲ್ಲಿ ಪಾಲ್ಗೊಂಡು ನೆದರ್ಲೆಂಡ್ಸ್ ಪ್ರತಿನಿಧಿಸಿದರೆ, ಮರೀನಾ ಮಚೆಟೆ, ಟಾಪ್ 20 ಸೆಮಿ ಫೈನಲಿಸ್ಟ್ ಮೆಟ್ಟಿಲನ್ನು ತುಳಿದರು.

### ಆತ್ಮವಿಶ್ವಾಸವೇ ಚೆಲುವು

1952ರಲ್ಲಿ ಆರಂಭವಾದ ಭುವನ ಸುಂದರಿ ಸ್ಪರ್ಧೆ ನಡೆಯುವುದು 'ಆತ್ಮವಿಶ್ವಾಸದ ಚೆಲುವು' (**Beautifully confident**) ಎನ್ನುವ ಉದ್ದೇಶದ ಮೇಲೆ. ರಿಕಿ ಹಾಗೂ ಮರೀನಾ ಕಥೆಗಳು ಕೂಡ ಈ ಆತ್ಮವಿಶ್ವಾಸದ ನಿಜ ಸೌಂದರ್ಯವನ್ನೇ ಬಿಂಬಿಸುವಂತಿವೆ.

ರಿಕಿ, 22 ವರ್ಷದ ಡಚ್ ರೂಪದರ್ಶಿ. ಗಂಡಾಗಿ ಹುಟ್ಟಿದ್ದ ಅವರಲ್ಲಿ ಎಂಟನೇ ವಯಸ್ಸಿಗೆ ತನ್ನ ದೇಹದ ಕುರಿತೊಂದು ಅಭದ್ರತೆ ಕಾಡಲು ಶುರುವಾಗಿತ್ತು. ಹನ್ನೊಂದನೇ ವಯಸ್ಸಿಗೆ ಈ ಪಲ್ಲಟವನ್ನು ಅರ್ಥ ಮಾಡಿಕೊಂಡ ಅವರನ್ನು ನಿರ್ಲಕ್ಷಿಸದೇ, ಕುಟುಂಬ ಹಾಗೂ ಗೆಳೆಯರು ಬೆನ್ನಿಗೆ ನಿಂತರು. 16ನೇ ವಯಸ್ಸಿಗೆ ಹೆಣ್ಣಾಗಿ ಪರಿವರ್ತನೆಯಾದ ಅವರಲ್ಲಿ ರೂಪದರ್ಶಿಯಾಗುವ ಆಸೆಯೂ ಹುಟ್ಟಿಕೊಂಡಿತು.

ಹಾಲೆಂಡ್‌ನ 'ನೆಕ್ಸ್ಟ್ ಟಾಪ್ ಮಾಡೆಲ್' ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದ ಅವರ ಹಾದಿ ಹೂವಾಗಿಯೇನೂ ಇರಲಿಲ್ಲ. ಸಮಾಜದಲ್ಲಿ ಚಿಕ್ಕ ವಯಸ್ಸಿನಿಂದಲೇ ಅಸಮಾನತೆಯನ್ನು ಕಂಡುಂಡು ಬೆಳೆದ ಅವರ ಮನದಲ್ಲಿ ಸಮಾನ ಬದುಕಿನ ಕನಸು ತುಂಬಿಕೊಂಡಿತ್ತು. ಲಿಂಗತ್ವದ ಕಾರಣಕ್ಕೇ ನಿಂದನೆಗೆ ಒಳಗಾಗಿದ್ದ ಅವರು ಎಲ್‌ಜಿಬಿಟಿ ಹಕ್ಕುಗಳ ಕುರಿತಂತೆ ಹೋರಾಟದಲ್ಲಿ ಪಾಲ್ಗೊಂಡರು.

ರೂಪದರ್ಶಿಯಾದ್ದರಿಂದ ತಮ್ಮ ಸಮುದಾಯವನ್ನು ಪ್ರತಿನಿಧಿಸಲು ಸೌಂದರ್ಯ ಸ್ಪರ್ಧೆ ಉತ್ತಮ ವೇದಿಕೆಯಾಗಬಲ್ಲದು ಎಂಬುದನ್ನು ಕಂಡುಕೊಂಡ ಅವರು, ಇದೇ ಜುಲೈನಲ್ಲಿ 'ಮಿಸ್ ನೆದರ್ಲೆಂಡ್ಸ್' ಸ್ಪರ್ಧೆಯಲ್ಲಿ ಪಾಲ್ಗೊಂಡರು. 9 ಫೈನಲಿಸ್ಟ್‌ಗಳನ್ನು ಹಿಂದಿಕ್ಕಿ ಗೆಲುವು ಸಾಧಿಸಿದರು ಕೂಡ. 'ಮಿಸ್ ನೆದರ್ಲೆಂಡ್ಸ್' ಕಿರೀಟ ಇವರ ಮುಡಿಯೇರಿ, ಡಚ್‌ನ ಸೌಂದರ್ಯ ಸ್ಪರ್ಧೆಯ ಇತಿಹಾಸದಲ್ಲಿಯೇ, 'ಮಿಸ್ ನೆದರ್ಲೆಂಡ್ಸ್' ಮುಕುಟ ಗೆದ್ದ ಮೊದಲ ಟ್ರಾನ್ಸ್‌ಜೆಂಡರ್ ವುಮೆನ್ ಎಂಬ ಪಟ್ಟವೂ ಜೊತೆ ಸೇರಿತು.

### ಸೌಂದರ್ಯದ ಪರಿಧಿ ಮೀರಿ...

'ಮಿಸ್ ನೆದರ್ಲೆಂಡ್ಸ್' ಕಿರೀಟ ರಿಕಿಗೆ ಒಲಿಯುತ್ತಿದ್ದಂತೆ ನೆಗೆಟಿವ್ ಕಮೆಂಟ್‌ಗಳ ಸುರಿಮಳೆಯೇ ಹರಿದುಬಂತು. ಅವರಿಗೆ ಸ್ಪರ್ಧೆಗೆ ಅವಕಾಶ ನೀಡಿದ ಕುರಿತು ವಿರೋಧಗಳೂ ಕೇಳಿಬಂದವು. 'ಈಕೆ ಸುಂದರ ಯುವತಿ ಹೌದು. ಆದರೆ ಟ್ರಾನ್ಸ್‌ಜೆಂಡರ್ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಬೇಕಿತ್ತೇ ಹೊರತು ನಿಜವಾದ ಮಹಿಳೆಯರಿಗಿರುವ ಸ್ಪರ್ಧೆಯಲ್ಲಲ್ಲ' ಎಂಬ ಮಾತುಗಳೂ ಎದುರಾದವು.

ಸೌಂದರ್ಯದ ಈ ಸಿದ್ಧ ವ್ಯಾಖ್ಯಾನವನ್ನು ಬದಲಿಸುವ, ಈ ಮೂಲಕ ತಮ್ಮ ಸುತ್ತಲ ಪರಿಧಿಯನ್ನು ಮುರಿಯುವ ಹಂಬಲದೊಂದಿಗೆ ರಿಕಿ ಭುವನ ಸುಂದರಿ ಸ್ಪರ್ಧೆಗೆ ಅಡಿಯಿಟ್ಟರು. ತಮ್ಮನ್ನು ಇಲ್ಲಿಯವರೆಗೂ ಕರೆತಂದ ಚುಚ್ಚುಮಾತುಗಳಿಗೂ ಧನ್ಯವಾದ ಹೇಳಿದರು.

'ಈ ಭೂಮಂಡಲದಲ್ಲಿ ನೀನು ಎಂದಿಗೂ ಒಂಟಿಯಲ್ಲ. ಆತ್ಮವಿಶ್ವಾಸ ತುಂಬಿಕೊಂಡಿರುವ ನೀನು ನಿನ್ನ ಅತ್ಯುನ್ನತ ಹಂತದ ಕನಸು ಕಾಣುವುದನ್ನು ನಿಲ್ಲಿಸಬೇಡ. ನಿನಗೆ ಯಾವುದು ಒಳ್ಳೆಯದು ಎಂಬುದನ್ನು ನೀನೇ ಕಂಡುಕೊ. ನಿನ್ನ ಅತ್ಯುತ್ತಮ ಆಯಾಮ ನೀನೇ ಎಂದು ಮರೆಯಬೇಡ' – ಸೌಂದರ್ಯ ಸ್ಪರ್ಧೆಗೆ ಬಂದ ನಂತರ ಲಿಂಗತ್ವ ಅಲ್ಪಸಂಖ್ಯಾತರನ್ನು ಉದ್ದೇಶಿಸಿ ಸಾಮಾಜಿಕ ಜಾಲತಾಣದಲ್ಲಿ ಅವರು ಹಂಚಿಕೊಂಡ ಈ ಸಾಲುಗಳು ಅವರ ಜೀವನಪ್ರೀತಿಯ ಚೆಲುವನ್ನು ಎದ್ದುತೋರುವಂತೆ ಮಾಡುತ್ತವೆ.

### ಅನನ್ಯ ದೇಹ, ವ್ಯಕ್ತಿತ್ವದ ಆಕರ್ಷಣೆ

ಗಗನಸಖಿಯಾಗಿದ್ದ ಮರೀನಾ ಮಚೆಟೆ ಅವರಿಗೀಗ 28 ವರ್ಷ. ಪಲ್ಮೇಲಾ ಎಂಬ ಪುಟ್ಟ ನಗರದಲ್ಲಿ ಹುಟ್ಟಿ ಬೆಳೆದ ಅವರು ಕೂಡ ತಮ್ಮ ಲಿಂಗತ್ವದ ಕಾರಣಕ್ಕೇ ಹಿಂಸೆ–ಅವಮಾನ ಅನುಭವಿಸಿದವರು. ನಿಂದನೆಗೆ ಕಾರಣವಾದ ದೇಹವನ್ನೇ ಬಳಸಿಕೊಂಡು ಸೌಂದರ್ಯಕ್ಕಿರುವ ಮಾನದಂಡಗಳನ್ನು ಮೀರಿ, ಜಗತ್ತಿಗೆ ಹೊಸ ಧಾಟಿಯಲ್ಲಿ ತಮ್ಮನ್ನು ಪರಿಚಯಿಸಿಕೊಳ್ಳುವ ಹಂಬಲದೊಂದಿಗೆ 'ಮಿಸ್ ಪೋರ್ಚುಗಲ್' ಸ್ಪರ್ಧೆಯಲ್ಲಿ ಭಾಗವಹಿಸಿದರು.

ಇದೇ ಅಕ್ಟೋಬರ್‌ನಲ್ಲಿ ನಡೆದ 'ಮಿಸ್ ಪೋರ್ಚುಗಲ್' ಸ್ಪರ್ಧೆಯಲ್ಲಿ 16 ಸ್ಪರ್ಧಿಗಳನ್ನು ಹಿಂದಿಕ್ಕಿ ಗೆದ್ದದ್ದು, 'ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದ ಮೊದಲ ಪೋರ್ಚುಗಲ್ ಟ್ರಾನ್ಸ್‌ಜೆಂಡರ್' ಎಂಬ ಇತಿಹಾಸವನ್ನೂ ಬರೆಯಿತು. ಆದರೆ ಈ ಗೆಲುವು ಹಲವು ತೆಗಳಿಕೆಗಳನ್ನೂ ಜೊತೆಗೆ ತಂದುಕೊಟ್ಟಿತು. ಗೆಲುವನ್ನು, ಅದರೊಂದಿಗೆ ಬಂದ ನಿಂದನೆಯನ್ನೂ ಆತ್ಮವಿಶ್ವಾಸವಾಗಿ ಮಾರ್ಪಡಿಸಿಕೊಂಡು ಭುವನ ಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಿದರು ಮರೀನಾ. ಟಾಪ್ 20 ಸೆಮಿಫೈನಲಿಸ್ಟ್ ಪಟ್ಟಿಯಲ್ಲಿದ್ದ ಅವರಿಗೆ 'ಮೋಸ್ಟ್ ಕಾನ್ಫಿಡೆಂಟ್ ಅವಾರ್ಡ್' ದೊರೆತದ್ದು ಬದುಕಿನೆಡೆಗಿನ ಉತ್ಸಾಹವನ್ನು ತುಂಬಿದೆ.

'ಸವಾಲುಗಳನ್ನು ನಾನು ಎದುರಿಸಿದ ರೀತಿಯ ಬಗ್ಗೆ ನನಗೆ ಹೆಮ್ಮೆಯಿದೆ. ಇದು ಮಾನವೀಯತೆಯನ್ನು ಗಟ್ಟಿಗೊಳಿಸಿಕೊಳ್ಳಲು ಸಹಾಯ ಮಾಡಿದೆ. ಬೇರೆಯವರೊಂದಿಗೆ ದಯೆ, ಕರುಣೆಯಿಂದ ನಡೆದುಕೊಳ್ಳಬೇಕಾದ ಅಗತ್ಯವನ್ನು ಮನವರಿಕೆ ಮಾಡಿದೆ. ಟ್ರಾನ್ಸ್‌ಜೆಂಡರ್ ಆಗಿ ನಾನು ನಡೆದುಬಂದ ದಾರಿಯುದ್ದಕ್ಕೂ ಸಾಕಷ್ಟು ಅಡೆತಡೆಗಳನ್ನು ನೋಡಿದೆ. ಆದರೆ ಈ ವಿಶ್ವದಂತೆ ನಮ್ಮ ಜೀವನದಲ್ಲಿ ಸಾಧ್ಯತೆಗಳೂ ಅಸಂಖ್ಯ ಎಂಬುದನ್ನು ಕಂಡುಕೊಂಡಿದ್ದೇನೆ. ಕನಸುಗಳಿಗಷ್ಟೇ ನಾವು ಸೀಮಿತವಲ್ಲ ಎಂಬುದನ್ನು ತಿಳಿದುಕೊಂಡಿದ್ದೇನೆ. ವೈವಿಧ್ಯದಲ್ಲಿಯೇ ಸೌಂದರ್ಯ ಅಡಗಿದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಮ್ಮ ಈ ಅನನ್ಯ ದೇಹ, ವ್ಯಕ್ತಿತ್ವವನ್ನು ನಾವು ಒಪ್ಪಿಕೊಳ್ಳಬೇಕು...'– ತಮ್ಮ ನಿಲುವನ್ನು ಹೀಗೆ ಸರಳವಾಗಿ, ನೇರವಾಗಿ ಹೇಳುವ ಮರೀನಾ ಮಾತುಗಳು ಕೂಡ ಅವರಷ್ಟೇ ಸೊಗಸು.

**ಪ್ರತಿಕ್ರಿಯಿಸಿ: feedback@sudha.co.in**